ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ದಿನಾಂಕ ೨೯ನೇ ಮಾರ್ಚಿ ೧೯೮೪ ಚೈತ್ರ, ೯; ೧೯೦೦ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು.]

ಅಧ್ಯಕ್ಷರು.— ೧೪೮–೪ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ. ಮಾನ್ಯ ಎನ್. ಜೆಚ್. ಗೌಡರವರು ಮಾತನಾಡಿ.

ರಾಜ್ಯಸಭಾ ಚುನಾವಣೆ ಸಂದರ್ಭದಲ್ಲಿ ನಡೆಯಿತೆನ್ನಲಾದ ಭ್ರಷ್ಟಾಚಾರದ ಬಗ್ಗೆ ಪ್ರಸ್ತಾಪ

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ವಿರೋಧ ಪಕ್ಷದ ನಾಯಕಿ) —ಮಾನ್ಯ ಅಧ್ಯಕ್ಷರೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ತಾವು ಅದಕ್ಕೆ ಅಪ್ಪಣೆಯನ್ನು ಕೊಡಬೇಕು. ನಾನು ಕುಳಿತುಕೊಂಡು ಮಾತನಾಡುತ್ತೇನೆ. ಮಾನವಿಲ್ಲದ ಅವಮಾನ ತರುವಂತಹ ಒಂದು ಕೃತ್ಯವನ್ನು ತಮ್ಮ ಮುಂದೆ ಇಡಬೇಕಾಗಿ ಬಂದಿರುವುದು ನನ್ನ ದೌರ್ಭಾಗ್ಯ. ನಿನ್ನೆ ಚುನಾವಣೆಯಾದ ಮೇಲೆ ನನಗೆ ಇಬ್ಬರು ಸದಸ್ಯರು ಕೆಲವು ವಿಚಾರಗಳನ್ನು ನನ್ನ ಗಮನಕ್ಕೆ ತಂದರು. ಆ ಕೂಡಲೇ ನಾನು ತಮ್ಮ ಮನೆಗೆ ಬಂದು, ನನಗೆ ಹೇಳಿದಂತಹ ದೂರನ್ನು ಹಾಗೂ ಅವರು ಕೊಟ್ಟಂತಹ ಹಣವನ್ನು ಒಪ್ಪಿಸಿದ್ದೇನೆ ಒಂದೂವರೆ ಲಕ್ಷ ರೂಪಾಯಿಗಳನ್ನು ಒಪ್ಪಿಸಿದ್ದೇನೆ. ನಮ್ಮ ಕಡೆಯ ಇಬ್ಬರು ಸದಸ್ಯರಿಗೆ ಜನತಾ ಪಾರ್ಟಿ ಕಡೆಯಿಂದ ದುಡ್ಡು ಬಂದಿದೆ. ಆ ಹಣವನ್ನು ಅವರಲ್ಲಿರುವಂತಹ ಪರರು ವೋಟು ಕೊಡುವುದಿಲ್ಲವೆಂದು...

ಶ್ರೀ ಎ ಲಕ್ಷ್ಮೀಸಾಗರ್.—ನಾನು ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಯಾವ ಒಂದು ನಿಯೋಮಾವಳಿ ಪ್ರಕಾರ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡುತ್ತಿದ್ದೀರಿ. ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ. ತಮ್ಮಲ್ಲಿ ನಾನು ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಅವರು ಈ ವಿಷಯವನ್ನು ಸಭೆಯಲ್ಲಿ ಪ್ರಸ್ತಾಪ ಮಾಡಬೇಕಾದರೆ. ಅದು ಎಂತಹ ಮಹತ್ವದ್ದೇ ಆಗಲಿ ನಿಯಮಾವಳಿ ಪ್ರಕಾರವೇ ಮಾಡಬೇಕಾಗುತ್ತದೆ. ಇದು ನನ್ನ ಕ್ರಿಯಾಲೋಪದಲ್ಲಿ ಮೊದಲನೇ ಅಂಶ. ಎರಡನೆಯದ್ದು ಇಂತಹ ಸಮಸ್ಯೆ ಬಂದಾಗ ರೂಲ್ ೩೧೧ರ ಪ್ರಕಾರ—

> "No allegation of a defamatory or incriminatory nature shall be made by a member against any person unless the member has given previous intimation to the Speaker and also to the Minister concerned so that the Minister may be able to make an investigation into the matter or the purpose of reply."

ತಮಗೆ ರಾತ್ರಿ ಹತ್ತುವರೆ ಗಂಟೆಗೆ ಇವರು ಬಂದು ಈ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎನ್ನತಕ್ಕಂಥ ವಿಷಯವನ್ನು ಸನ್ಮಾನ್ಯ ನಾಯಕಿಯವರು ಹೇಳಿ ತಮಗೆ ದುಡ್ಡು ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಇದರ ಬಗ್ಗೆ ತಿಳುವಳಿಕೆಯನ್ನು ಕೊಡುವುದರ ಜೊತೆಗೆ ಯಾರ ಮೇಲೆ ಆಪಾದನೆ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ ಅಂತಹ ಮಂತ್ರಿ ಅಥವಾ ಸದಸ್ಯನಿಗೂ ಕೂಡ ಇದರ ನೋಟೀಸ್ ಕೊಡಬೇಕಾದಂಥ ಅಗತ್ಯತೆ ಇದೆ. ನಿಯಮ ೫೧೧ರ ಪ್ರಕಾರ ಈ ನಿಯಮವನ್ನು ಅವರು ಪರಿಪೂರ್ಣವಾಗಿ ಪಾಲನೆ ಮಾಡಿಲ್ಲ. ಅರ್ಧ ಭಾಗ ಪಾಲನೆ ಮಾಡಿದ್ದಾರೆ ಎಂದುಕೊಂಡರೂ ನಿಯಮ ೫೧೧ರ ಪ್ರಕಾರವಾಗಿ ಯಾರು ಈ ಆಪಾದನೆಗೆ ಉತ್ತರ ಹೇಳಬೇಕೋ ಜವಾಬ್ದಾರಿಯಿಂದ, ಅವರಿಗೂ ನೋಟೀಸ್ ಕೊಟ್ಟಿಲ್ಲ. ಆದ್ದರಿಂದ ಈ ಎರಡು ಅಂಶಗಳನ್ನು ಒಳಗೊಂಡಿರತಕ್ಕಂಥ ಸನ್ನ ಕ್ರಿಯಾಲೋಪವನ್ನು ಎತ್ತಿ ಹಿಡಿಯ ಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್ ವೆಂಕಟರಾಮಯ್ಯ.—ಅಧ್ಯಕ್ಷರೇ...

ಅಧ್ಯಕ್ಷರು —ನೀವು ಕುಳಿತುಕೊಳ್ಳಿ.

ಶ್ರೀ ಆರ್. ವೆಂಕಟರಾಮಯ್ಯ. —ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿಬಿಟ್ಟು ಆಗಿದೆ. ಅದು ರೆಕಾರ್ಡಿಗೆ ಬಂದಿದೆ. ಒಂದೂವರೆ ಲಕ್ಷ ಕೊಟ್ಟಿದ್ದಾರೆ ಎಂದು ಏನು ಹೇಳಿದ್ದಾರೆ ಅದು ರೆಕಾರ್ಡಿಗೆ ಹೋಗಿದೆ. ಆದ್ದರಿಂದ ಈ ಕ್ರಿಯಾಲೋಪದಿಂದ ಪ್ರಯೋಜನ ಆಗುವುದಿಲ್ಲ. ಇದು ಬಹಳ ಸೀರಿಯಸ್ ಅಲಿಗೇಶನ್. ಅವರು ವೇಗ್ ಆಗಿ ಹೇಳುವುದಕ್ಕೆ ಮುಂಚೆ ಇಬ್ಬರು ಸದಸ್ಯರ ಹೆಸರು ಗಳನ್ನು ಹೇಳಿದ್ದರೆ ಚೆನ್ನಾಗಿ ಇರುತ್ತಿತ್ತು.

(ಗೊಂದಲ)

ಶ್ರೀ ಡಿ. ಟಿ. ಜಯಕುಮಾರ್ —ಈ ಕಾರಣಕ್ಕೋಸ್ಕರವೇ ಕ್ರಿಯಾಲೋಪ ಬಂದಿದೆ

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ವಿರೋಧ ಪಕ್ಷದ ನಾಯಕರು ಅತ್ಯಂತ ಗುರುತರ ವಾದಂಥ, ತಮ್ಮ ಸ್ಥಾನಕ್ಕೇ ಅಪಮಾನವಾಗತಕ್ಕಂಥ ಘಟನೆ ನಡೆದಿದೆ. ತಮ್ಮನ್ನು ಭೇಟಿ ಮಾಡಿ ಜನತಾ ಪಕ್ಷದ ಶಾಸಕರು ಅಥವಾ ಪ್ರಮುಖರು ಈ ಬಗ್ಗೆ ಇಬ್ಬರು ಶಾಸಕರಿಗೆ ಒಂದೂವರೆ ಲಕ್ಷ ದುಡ್ಡು ಏನು ಕೊಟ್ಟಿದ್ದಾರೆ ಅದನ್ನು ತಮಗೆ ತಂದುಕೊಟ್ಟಿದ್ದೇನೆ ಎಂದು ಹೇಳಿದ್ದಾರೆ. ಇದು ತಮ್ಮ ಗಮನಕ್ಕೆ ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಜವಾಬ್ದಾರಿ ಸ್ಥಾನದಲ್ಲಿ ನಿಂತು ಇದನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ ಯಾವುದೇ ರೂಲ್ಸ್ ಇದ್ದರೂ ಅದನ್ನು ಸಸ್ಪೆಂಡ್ ಮಾಡಿ. ಇದು ಈ ರಾಜ್ಯದ ಜನತೆಗೆ ಸಂಬಂಧಪಟ್ಟಿದ್ದು, ಶಾಸಕರಿಗೆ ಅಪಮಾನ ಗೊಳಿಸುವ ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಇಕ್ಕೆ ಇದೆ. ಆದ್ದರಿಂದ ಅವರು ಸಂಪೂರ್ಣ ವಿವರಣೆ ಯನ್ನು ಕೊಟ್ಟಮೇಲೆ ಸರ್ಕಾರ ಉತ್ತರ ಕೊಡುವುದಿದ್ದರೆ ಕೊಡಲಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ...

ಶ್ರೀ ರಾಮಕೃಷ್ಣ ಹೆಗಡೆ (ವಿಧಾನಸಭೆ ಮಂತ್ರಿ). —ನನಗೂ ಒಂದು ಮಾತನ್ನು ಹೇಳುವ ಅಧಿಕಾರ ಇದೆಯೋ ಇಲ್ಲವೊ ? ಮಾನ್ಯ ಅಧ್ಯಕ್ಷರೇ, ಈ ತರಹದ ಪ್ರಕರಣ ಈ ಸಭೆಯ ಮುಂದೆ ಬರುತ್ತಿರುವುದು ಇದು ಮೊದಲನೇ ಸಲ ಅಲ್ಲ. ಇದರಲ್ಲಿ ಎಷ್ಟು ಸತ್ಯ ಇದೆ. ಸತ್ಯ ಇಲ್ಲವೆಂದು ಹೇಳುವುದನ್ನು ನಾವು ಈ ಕ್ಷಣದಲ್ಲಿ ಹೇಳುವುದಕ್ಕೆ ಆಗುವುದಿಲ್ಲ. ಚುನಾವಣೆಯಲ್ಲಿ ದುಡ್ಡು ಹಂಚತಕ್ಕಂಥ ಪದ್ಧತಿ ಯಾರಲ್ಲಿ ಇದೆ, ದುಡ್ಡು ಯಾರ ಹತ್ತಿರ ಇದೆ, ಯಾವ ಪಕ್ಷದಲ್ಲಿದೆ ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಆದರೆ ಈ ವಿಚಾರವನ್ನು ಇಲ್ಲಿ ವಿರೋಧ ಪಕ್ಷದ ನಾಯಕರು ಎತ್ತಿದ್ದಾರೆ. ನಾನು ಒಪ್ಪುತ್ತೇನೆ, ಇದನ್ನು ನಾವು ಅತ್ಯಂತ ಟೆಕ್ನಿಕಲ್ ಆಗಿ ನಿಯಮಗಳಿಗೆ ಬದ್ಧವಾಗಿ ಎತ್ತಬೇಕು, ನಿಯಮಾವಳಿಯ ಅಡಿಯಲ್ಲಿ ಎತ್ತಲಿಕ್ಕೆ ಬರುತ್ತದೆಯೋ ಇಲ್ಲವೋ ಎಂದು ಇದರ ಬಗ್ಗೆ ಜಿಜ್ಞಾಸೆ ಮಾಡಿ ತರ್ಕ ವಿತರ್ಕ ಮಾಡುವಂಥ ಅಗತ್ಯ ಇಲ್ಲ. ಇಂಥಾದ್ದು ಏನಾದರೂ ಮಾಡಿದ್ದರೆ ಅದು ಅತ್ಯಂತ ಖಂಡನೀಯವಾದದ್ದು.

ಮತ್ತು ಈ ಮನೆಯ ಘನತೆಗೆ ಅಗೌರವವನ್ನು ತರತಕ್ಕಂಥದ್ದು. ಆದ್ದರಿಂದ ನಿಮಗೆ ಮನವಿ ಮಾಡಿ ಕೊಳ್ಳುತ್ತೇನೆ. ಈ ಮನೆಯ, ಈ ಸದನದ ಮೂಲಕ ಸಿ ಆಥವಾ ಜಿ ಜನರ ಒಂದು ಕಮಿಟಿಯನ್ನು ನೇಮಕ ಅವರು ಮಾಡಿ, ಎನ್‌ಕ್ವೈರಿ ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಅವರು ಇನ್ನೂ ವಿಷಯವನ್ನು ಪ್ರಸ್ತಾಪ ಮಾಡಿಯೇ ಇಲ್ಲ, ನೀವೇ ಸಲಹೆ ಕೊಟ್ಟರೆ ಹೇಗೆ? ಮೊದಲು ವಿಷಯಂಗಳನ್ನು ವಿವರವಾಗಿ ಪ್ರಸ್ತಾಪ ಮಾಡಲಿ, ಆ ಮೇಲೆ ಕಮಿಟಿ ಮಾಡುವುದೇ, ಸಿ.ಬಿ.ಐ. ಎನ್‌ಕ್ವೈರಿ ಮಾಡುವುದೇ; ಏನು ಎಂಬುದನ್ನು ನೋಡೋಣ ..

ಶ್ರೀ ರಾಮಕೃಷ್ಣಹೆಗಡೆ.—ಆ ರೀತಿ ಆಗುವುದಿಲ್ಲ. ನಾನು ಸೂಚನೆ ಕೊಡುತ್ತಿದ್ದೇನೆ. ಇಲ್ಲಿ ಧುಸಿ ಹಚ್ಚಿ ಹೋಗುವುದಕ್ಕೆ ಅವಕಾಶ ಕೊಡುವುದಿಲ್ಲ. ಈ ತರಹದ ಆಪಾದನೆಗಳನ್ನು ಮಾಡಿ ಹೋಗುವುದಿಲ್ಲ!

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನೂ ಅವರು ವಿಷಯವನ್ನೆ ಪ್ರಸ್ತಾಪ ಮಾಡಿಯೇ ಇಲ್ಲ, ಇನ್ನು ಸೂಚನೆ ಕೊಡುವುದು ಎಲ್ಲಿ ಬಂತು?

ಶ್ರೀ ರಾಮಕೃಷ್ಣಹೆಗಡೆ.—ಈ ಪತ್ರವನ್ನು ನಾನು ಈಗತಾನೆ ನೋಡಿದೆ. ೨೭ನೇ ತಾರೀಖಿನ ದಿವಸ ದುಡ್ಡು ಕೊಡುವುದಕ್ಕೆ ಯಾರಾದರೂ ಹೋಗಿದ್ದರೆ, ನಿನ್ನೆಯ ಇಡೀ ದಿವಸ, ಈ ಮನೆಯಲ್ಲಿ ಅದನ್ನು ಪ್ರಸ್ತಾಪ ಮಾಡಲಿಲ್ಲ, ಏಕೆ ಮಾಡಲಿಲ್ಲ, ಮಾಡಬಹುದಿತ್ತು. ಎನ್‌ಕ್ವೈರಿ ನೀವೇ ಮಾಡಿಸಿ. ಲೋಕಾಯುಕ್ತ ಬಂದಮೇಲೆ ಯಾವುದೇ ವಿಚಾರದಲ್ಲಿ ಜುಡಿಷಿಯಲ್ ಎನ್‌ಕ್ವೈರಿ ಪುನಃ ಮಾಡುವುದಿಲ್ಲ ಎಂದು ಹೇಳಿದ್ದೇನೆ. ಭ್ರಷ್ಟಾಚಾರ, ಸ್ವಜನಪಕ್ಷಪಾತ ಈ ರೀತಿ ಯಾವುದೇ ಆಪಾದನೆ ಬಂದರೂ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸುವುದಿಲ್ಲ ಎಂದು ಈ ಸದನದಲ್ಲಿ ಹೇಳಿದ್ದೇನೆ. ಕವ ಮ್ಯನಲ್ ಡಿಸ್ಟರ್ಬೆನ್ಸ್ ಆದಾಗ ಮಾತ್ರ ಜುಡಿಷಿಯಲ್ ಎನ್‌ಕ ರಿಮಾಡುತ್ತೇವೆ. ಬೇರೆ ಆಪಾದನೆಗಳಿಗಾಗಿ, ಒಂದು ಸಂಸ್ಥೆಯನ್ನೇ ನೇಮಕ ಮಾಡಿದ್ದೇವೆ, ಅದರ ಕೆಲಸವೇ ಅದು ಅದಕ್ಕಾಗಿ ನಾನು ಹೇಳುತ್ತೇನೆ.ಈ ವಿಚಾರದಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡುವುದಕ್ಕೆ ಬರುವುದಿಲ್ಲ. ಹಿಂದೆ ಮಾವ್ಯ ಮೊಯ್ಲಿಯವರು ಮತ್ತು ಬೈರೇಗೌಡ ಅವರ ಮಧ್ಯೆ ಮಾತಿನ ಚಕಮಕಿ ಆಯಿತು. ಆಗ ಆವರಿಬ್ಬರೂ ಕೇಳಿದರು, ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಿ ಎಂದು. ಆಗ ನಾನು ಒಪ್ಪಿಕೊಂಡೆ. ಈಗ ಈ ಆರೋಪ ಬಂದಿದೆ. ಇದರಲ್ಲಿ ಯಾರೋ ಸಮ್ಮ ಸಮ್ಮನೆ ವಿಷ್ಯಾರೋಪ ಮಾಡಿ, ನಮ್ಮ ಪಕ್ಷಕ್ಕೆ ಅಥವಾ ನಿಮ್ಮ ಪಕ್ಷದ ಯಾರಾದರೂ ಒಬ್ಬಿಬ್ಬರು ಸದಸ್ಯರ ಮುಖಕ್ಕೆ ಮಸಿ ಹಚ್ಚುವುದು ಸರಿಯಲ್ಲ. ನಾಳೆ ದಿವಸ ಪೇಪರಿನಲ್ಲಿ ಬರುತ್ತದೆ. ಯಾರಂ ದುಡ್ಡು ತಂದು ಖರ್ಚು ಮಾಡುತ್ತಾರೆ ಎನ್ನತಕ್ಕಂಥದ್ದನ್ನು ನೀವು ಟೇಪ್‌ರೆಕಾರ್ಡ್ ಮಾಡಿ. ಜಿಲ್ಲಾ ಪರಿಷತ್ ಅಧ್ಯಕ್ಷರ ಚುನಾವಣೆಯಲ್ಲಿ ವಿಮಾನ ಬಂದು ಇಳಿಯಿತು, ಇದನ್ನು ನಿಮ್ಮ ಪಕ್ಷದ ಅಧ್ಯಕ್ಷರೇ ಒಪ್ಪಿದ್ದಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಮೊದಲು ಈ ಬಗ್ಗೆ ವಿಷಯ ಪ್ರಸ್ತಾಪ ಮಾಡಲಿ, ಯಾವ ಮಂತ್ರಿಗಳಂ ಕೊಟ್ಟಿದ್ದಾರೆ, ಸದಸ್ಯರು ಕೊಟ್ಟಿದ್ದಾರೆ ಇದರ ಬಗ್ಗೆ ಪ್ರಸ್ತಾಪ ಮಾಡಲಿ, ರೂಲ್ ಇಂಗಿರ ಪ್ರಕಾರ ಇದು ಬರುತ್ತದೆಯೇ ಇಲ್ಲವೋ ಎಂಬುದನ್ನು ಬೇಕಾದರೆ ಹೇಳಲಿ.

ಶ್ರೀ ರಾಮಕೃಷ್ಣಹೆಗಡೆ.—ಮಾನ್ಯ ಅಧ್ಯಕ್ಷರೇ, ಈ ಮನೆಯ ಸದಸ್ಯರ ಒಂದು ಸಮಿತಿಯನ್ನು ನೇಮಕ ಮಾಡಿ ದಯವಿಟ್ಟು ಎನ್‌ಕ್ವೈರಿ ಮಾಡಿಸಿ. ಯಾವ ವಿಚಾರ, ಯಾರು ದುಡ್ಡು ಕೊಟ್ಟರು, ಯಾರು ತೆಗೆದುಕೊಂಡರು?

ಶ್ರೀ ಎಸ್. ಬಂಗಾರಪ್ಪ.—ಯಾರು ಕೊಟ್ಟರು, ಯಾರು ತೆಗೆದುಕೊಂಡರು ಎಂಬ ವಿವರಗಳು ಬೇಡವೇ? ಈ ವಿವರಗಳನ್ನು ಇಲ್ಲಿ ಹೇಳಬೇಡವೇ? ಆದರೆ, ತಾವು ಆಗಲೇ ಇದಕ್ಕೆ ಮಂಗಳ ಹಾಡುತ್ತಿದ್ದೀರಿ.—

(ಗೊಂದಲ)

ಧ್ಯಕ್ಷರು.—ಹೌಸ್ ಕಮಿಟಿ ಮಾಡುವುದಕ್ಕೆ, ಅವರದೇನ ತಕರಾರು ಇಲ್ಲ ಎಂದು ಹೇಳಿದ್ದಾರೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ. —ವಿಷಯಪಟ್ಟಿಯ ಪ್ರಸ್ತಾಪ ಮಾಡುವುದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಬಿಡುತ್ತಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ರಾಜಭವನವನ್ನು ಕಾಂಗ್ರೆಸ್ ಸದಸ್ಯರು ಉಪಯೋಗಿಸಿಕೊಂಡ ಬಗ್ಗೆ ಪ್ರಸ್ತಾಪ

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ ನನ್ನದೊಂದು ಆಲಿಗೇಷನ್ ಇದೆ. ಈ ಎರಡು ವಿಚಾರಗಳೂ ಚರ್ಚೆಯಾಗಬೇಕು. ೧೨ತ್ರಿ ೧ ಗಂಟೆಗೆ ಇಲ್ಲಿರುವ ಕಾಂಗ್ರೆಸ್ ಎಂ.ಎಲ್.ಎ ಗಳನ್ನು ಎತ್ತಿಕೊಂಡು ಹೋಗಿ ರಾಜ್ಯಪಾಲರ ಭವನದಲ್ಲಿ ಇಟ್ಟುಕೊಂಡು ಆ ಭವನಕ್ಕೆ ಅಪಚಾರ ಮಾಡಿದ್ದಾರೆ, ಅದಕ್ಕೊಸ್ಕರ ಇದೂ ಎನ್‌ಕ್ವೈರಿ ಆಗಲಿ.

(ಗೊಂದಲ)

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಿ, ನಾನು ಶ್ರೀಮತಿ ನಾಗರತ್ನಮ್ಮನವರನ್ನು ಕರೆದಿದ್ದೇನೆ, ಅವರು ಹೇಳಲಿ.

ಶ್ರೀ ಎಸ್. ಬಂಗಾರಪ್ಪ.—ನೀವು ಅವರಿಗೆ ಏಕೆ ಅವಕಾಶ ಕೊಟ್ಟಿರಿ, ಅವರು ಕ್ರಿಯಾಲೋಪ ಎತ್ತಿದ್ದಾರೆ, ಅದಕ್ಕೆ ಸಂಬಂಧಪಟ್ಟಂಥ ವಿವರಣೆಯನ್ನು ಇಲ್ಲಿ ಕೊಡುವುದು ಬೇಡವೇ.

(ಗೊಂದಲ)

ಅಧ್ಯಕ್ಷರು.—ಹೌಸ್ ಕಮಿಟಿ ಮಾಡುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಕರಾರು ಏನೂ ಇಲ್ಲವೆಂದು ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ —ವಿವರಗಳನ್ನು ಕೊಡದೇ ಅದನ್ನು ಮುಗಿಸುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರಿಗೆ ಹೇಳಲಿಕ್ಕೆ ಅವಕಾಶ ಕೊಟ್ಟಿದ್ದೇನೆ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳಿದ ಬಗ್ಗೆಯೂ ಒಂದು ಎನ್‌ಕ್ವೈರಿ ಮಾಡುವುದಕ್ಕೆ ತಾವು ಒಪ್ಪಿಕೊಳ್ಳಬೇಕು. ಇದರ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಶಾಸಕರ ಭವನ, ರಾಜಭವನ, ಎಂತೊಂದು ಕಡೆಗೆ ಎತ್ತಿಕೊಂಡು ಹೋಗಿ ಸಮ್ಮಿಶ್ರ ಪಕ್ಷದ ಸದಸ್ಯರನ್ನು ಏನು ಬೇಕಾದರೂ ಮಾಡಿಕೊಳ್ಳುತ್ತೇವೆ, ತಮಗೆ ಏನು ?

ಶ್ರೀ ಆರ್. ವೆಂಕಟರಾಮಯ್ಯ.—ರಾಜಭವನವನ್ನು ಏತಕ್ಕೆ ಉಪಯೋಗಿಸಿಕೊಳ್ಳುತ್ತೀರಿ ? ಶಾಸಕರ ಭವನ ಇದೆಯಲ್ಲ. ಮಧ್ಯರಾತ್ರಿ ಒಂದು ಗಂಟೆಗೆ ರಾಜಭವನದಲ್ಲಿ ಇವರನ್ನು ಇಟ್ಟುಕೊಂಡಿದ್ದೀರಿ. ಇವರೆಲ್ಲರೂ ಬೂಟಾಸಿಂಗ್‌ರವರ ಜೊತೆಯಲ್ಲಿದ್ದರು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕಾಂಗ್ರೆಸ್‌ನವರು ಹಣ ಕೊಡುತ್ತಾರೆ ಎಂದು ಹೇಳುತ್ತಿದ್ದರು. ಅದೇ ಕೆಲಸ ಇವತ್ತು ಜನತಾ ಎಂ.ಎಲ್.ಎ.ಗಳು ಮಾಡುತ್ತಿದ್ದಾರೆ.....

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.—ಒಂದೂವರೆ ಲಕ್ಷ ರೂಪಾಯಿಗಳ ವಿಚಾರವನ್ನು ಎನ್‌ಕ್ವೈರಿ ಮಾಡಬೇಕೆಂದು ನಾನೂ ಹೇಳುತ್ತೇನೆ ಅದಕ್ಕೆ ಸಪೋರ್ಟ್ ಮಾಡುತ್ತೇನೆ. ಆದರೆ ನೀವು ಮಾಡಿದುದನ್ನು ನಾನು ಒಪ್ಪುವುದಿಲ್ಲ. ರಾಜಭವನ ಸರಿಯಾದ ಜಾಗ ಅಲ್ಲ.

(ಗೊಂದಲ)